SC No. 68/2024
PW-30

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

ಎಸ್. ಸಿ. 68/2024

| | | |
|---|---|---|
| ಸಾಕ್ಷಿದಾರರ ಹೆಸರು | ಮಹೇಶ ಸಿ. | ಪ್ರಮಾಣ ವಚನ ಮಾಡಿದ ದಿನಾಂಕ: 08.12.2025 |
| ತಂದೆಯ/ಗಂಡನ ಹೆಸರು | ಚಿಕ್ಕಸಿದ್ದಶೆಟ್ಟಿ | |
| ವಯಸ್ಸು | 36 ವರ್ಷ | |
| ವೃತ್ತಿ | ಮುಖ್ಯ ಪೇದೆ, ಕವಲಂದೆ ಪೊಲೀಸ್ ಠಾಣೆ | ಪ್ರಾ.ಸಾಃ 30 |
| ವಾಸ ಸ್ಥಳ | ನಂಜನಗೂಡು | ಚಾ.ಸಾಃ 36 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು *2018* ರಿಂದ ನವೆಂಬರ್*, 2023* ರವರೆಗೆ ನಂಜನಗೂಡು ಪಟ್ಟಣ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಪೊಲೀಸ್ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *30.11.2023* ರಂದು ಕವಲಂದೆ ಪೊಲೀಸ್ ಠಾಣಾ ಮೊ.ಸಂಖ್ಯೆ *148/2023* ಕಲಂ *302, 354, 504, 506, 114* ಸಹ ಕಲಂ *34* ಐಪಿಸಿ ಪ್ರಕರಣದಲ್ಲಿ ಮೃತ ಪರಶಿವಪ್ಪ ರವರ ಶವ ಪಂಚನಾಮೆಯನ್ನು ಮೈಸೂರು ಸರ್ಕಾಕರಿ ಮೆಡಿಕಲ್ ಕಾಲೇಜಿನ ಶವಗಾರದಲ್ಲಿ ತನಿಖಾಧಿಕಾರಿಯಾದ ಚಂದ್ರಶೇಖರ್ ವೆ.ಎಸ್. , ಸಿಪಿಐ ರವರ ಉಕ್ತ ಲೇಖನದಂತೆ ನನ್ನ ಕೈಬರವಣಿಗೆಯಲ್ಲಿ ಶವ ಪಂಚನಾಮೆಯನ್ನು ಬರೆದಿದ್ದೆನು. ಸದರಿ ಸಮಯದಲ್ಲಿ ಫೋಟೋಗಳನ್ನು ಇಲಾಖಾ ಕ್ಯಾಮೆರಾದಲ್ಲಿ ತೆಗೆದಿದ್ದೆನು. ಸಾಕ್ಷಿದಾರರು ಶವ ಪಂಚನಾಮೆಯನ್ನು

ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*3* ಎಂದು ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–*4* ರಿಂದ *17* ಅಂತ ಗುರುತಿಸಲ್ಪಟ್ಟಿರುತ್ತವೆ.

ಅದೇ ದಿನ ಕೃತ್ಯ ನಡೆದ ಸ್ಥಳ ವಾದ ನಂಜನಗೂಡು ತಾಲ್ಲೂಕು ಪಿ.ಮರಳ್ಳಿ ಗ್ರಾಮದ ಸರ್ವೆ ನಂಬರ್ *298/2* ಜಮೀನಿನಲ್ಲಿ ತನಿಖಾಧಿಕಾರಿಯವರ ಉಕ್ತಲೇಖನದಂತೆ ಮಹಜರ್ ಅನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿದ್ದೆನು. ಸದರಿ ಸಮಯದಲ್ಲಿಯೂ ಸಹ ಇಲಾಖಾ ಕ್ಯಾಮೆರಾದಿಂದ ಫೋಟೋಗಳನ್ನು ತೆಗೆದಿದ್ದೆನು. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*18* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.*18(*ಡಿ*)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–*19* ಎಂದು ಗುರುತಿಸಲ್ಪಟ್ಟಿರುತ್ತದೆ.

ನನ್ನ ಕೈಬರವಣಿಗೆಯಲ್ಲಿ ತನಿಖಾಧಿಕಾರಿಯವ ಉಕ್ತ ಲೇಖನದಂತೆ ಬರೆದು ಪಂಚರಿಗೆ ನೊಟೀಸ್ ಕೊಟ್ಟಿತ್ತು. ಸಾಕ್ಷಿದಾರರು ನೋಟೀಸ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. *47* ಎಂದು ಗುರುತಿಸಲಾಯಿತು.

ದಿನಾಂಕ *01.12.2023* ರಂದು ಪ್ರಕರಣದ ಆರೋಪಿತ ಆದೀಶ್ ಎಂಬುವರು ತೋರಿಸಿದ ಕೃತ್ಯದ ಸ್ಥಳ ಮತ್ತು ಕೃತ್ಯಕ್ಕೆ ಉಪಯೋಗಿಸಿದ್ದ ಮಚ್ಚನ್ನು ತೆಗೆದು ಹಾಜರುಪಡಿಸಿದ ಸಂದರ್ಭದಲ್ಲಿ ತನಿಖಾಧಿಕಾರಿಯವರು ಜರುಗಿಸಿದ ಅಮಾನತ್ತು ಪಂಚನಾಮೆಯನ್ನು ತನಿಖಾಧಿಕಾರಿಯವರ ಉಕ್ತಲೇಖನದಂತೆ ಅಮಾನತ್ತು ಪಂಚನಾಮೆಯನ್ನು ನನ್ನ

ಕೈಬರವಣಿಗೆಯಲ್ಲಿ ಬರೆದಿದ್ದೆನು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.20 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.20(ಸಿ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿಯೂ ಸಹ ಇಲಾಖಾ ಕ್ಯಾಮೆರಾದಿಂದ ಫೋಟೋ ತೆಗೆದಿದ್ದೆನು. ಸಾಕ್ಷಿದಾರರು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–21 ಎಂದು ಗುರುತಿಸಲ್ಪಟ್ಟಿರುತ್ತದೆ.

ದಿನಾಂಕ 03.12.2022 ರಂದು ಮೃತ ಪರಶಿವಪ್ಪ ರವರ ಬಟ್ಟೆಗಳನ್ನು ಹಚ್.ಸಿ 281 ಮುಕಂದ ರವರು ತಂದು ವೃತ್ತ ಕಛೇರಿಯಲ್ಲಿ ಹಾಜರುಪಡಿಸಿದ ಮೇರೆಗೆ ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿದ್ದು ಸದರಿ ಮಹಜರ್ ಅನ್ನು ತನಿಖಾಧಿಯವರ ಉಕ್ತ ಲೇಖನದಂತೆ ನನ್ನ ಕೈಬರವಣಿಗೆಯಲ್ಲಿ ಬರೆದಿದ್ದೆ ಮತ್ತು ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದೆ. ಸಾಕ್ಷಿದಾರರು ಬಟ್ಟೆಗಳ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–24 ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ–24(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–25 ಮತ್ತು 26 ಎಂದು ಗುರುತಿಸಲ್ಪಟ್ಟಿರುತ್ತದೆ. ಆ ಸಮಯದಲ್ಲಿ ಪಂಚರಿಗೆ ನೀಡಿದ ನೋಟೀಸ್ ಅನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿದ್ದೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನೋಟೀಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–48 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ–2 ರಿಂದ 5 ಎಂದು ಗುರುತಿಸಲ್ಪಟ್ಟಿರುತ್ತವೆ.

ದಿನಾಂಕ *17.12.2023* ರಂದು ವೃತ್ತ ಕಛೇರಿಯಲ್ಲಿ ಆರೋಪಿ ಆದೀಶ್ ಎಂಬುವರ ಅಕ್ಕ ಬಸಂತ ಕುಮಾರಿ ಎಂಬುವರು ಆರೋಪಿಯ ಬಾಬ್ತು ಒಂದು ಮೊಬೈಲ್ ಅನ್ನು ಹಾಜರುಪಡಿಸಿದ್ದು ಸದರಿ ಮೊಬೈಲ್ ಅನ್ನು ಅಮಾನತ್ತು ಪಡಿಸಿಕೊಂಡ ವೇಳೆಯಲ್ಲಿ ಮಾಡಿದಂತಹ ಅಮಾನತ್ತು ಪಂಚನಾಮೆಯನ್ನು ತನಿಖಾಧಿಯವರ ಉಕ್ತ ಲೇಖನದಂತೆ ನನ್ನ ಕೈಬರವಣಿಗೆಯಲ್ಲಿ ಬರೆದಿದ್ದೆ ಮತ್ತು ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದೆ. ಸಾಕ್ಷಿದಾರರು ಮೊಬೈಲ್ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*27* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ–*27(ಡಿ)* ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟೀಸ್ ಅನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿದ್ದೆ, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನೋಟೀಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*49* ಎಂದು ಗುರುತಿಸಲಾಯಿತು.

ದಿನಾಂಕ *29.12.2023* ರಂದು ಮೈಸೂರು ಸೆನ್ ಪೊಲೀಸ್ ಠಾಣೆಯಲ್ಲಿ ಜರುಗಿಸಿದ ಪಂಚನಾಮೆಯನ್ನು ನಾನು ತನಿಖಾಧಿಕಾರಿಯವ ಉಕ್ತಲೇಖನದಂತೆ ಸೆನ್ ಪೊಲೀಸ್ ಠಾಣೆಯಲ್ಲಿ ಇದ್ದಂತಹ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿದ್ದೆ. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*28* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ. *28(ಡಿ)* ಎಂದು ಗುರುತಿಸಲಾಯಿತು. ನಾನು ಇಲಾಖಾ ಕ್ಯಾಮೆರಾದಲ್ಲಿ ತೆಗೆದಿದ್ದ ಫೋಟೋಗಳನ್ನು ನಮ್ಮ ಕಛೇರಿಯ ಹೆಚ್.ಪಿ. ಕಂಪ್ಯೂಟರ್ ಗೆ ಅಳವಡಿಸಿಕೊಂಡು ನಂತರ ನಂಜನಗೂಡಿನ ಸಂತು ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ನೀಡಿ

ಪ್ರಮಾಣ ಪತ್ರ ವನ್ನು ಕೊಟ್ಟಿದ್ದೆ. ಸಾಕ್ಷಿದಾರರು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*50* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–*50(ಎ)* ಎಂದು ಗುರುತಿಸಲಾಯಿತು. ನಾನು ಇಲಾಖೆಯ ಕ್ಯಾಮೆರಾದಲ್ಲಿ ಫೋಟೋ ತೆಗೆಯುವಾಗ ಮತ್ತು ಸದರಿ ಫೋಟೋಗಳನ್ನು ನಮ್ಮ ಠಾಣೆಯ ಕಂಪ್ಯೂಟರ್ ಗೆ ವರ್ಗಾಯಿಸಿಕೊಂಡಾಗ ಅವುಗಳು ಸುಸ್ಥಿತಿಯಲ್ಲಿ ಇದ್ದವು.

ಸಾಕ್ಷಿದಾರರು ಮೊಬೈಲ್ ಅಮಾನತ್ತು ಪಂಚನಾಮೆ ಕಾಲದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*51* ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಸಿ.ಎಂ.ಜಿ. ವಕೀಲರಿಂದ :**

ನಾನು ತನಿಖಾಧಿಕಾರಿಯವರ ಜೊತೆಯಲ್ಲಿ ಕೃತ್ಯ ನಡೆದ ಸ್ಥಳ ವಾದ ಪಿ.ಮರಳ್ಳಿಪುರ ಗ್ರಾಮದ ಸರ್ವೆ ನಂಬರ್ 298/2 ಕ್ಕೆ ಹೋಗಿ ಸ್ಥಳ ಪಂಚನಾಮೆ ಮಾಡಿದಾಗ ತನಿಖಾಧಿಕಾರಿಯವರ ಉಕ್ತ ಲೇಖನದಂತೆ ಪಂಚನಾಮೆಯನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿದ್ದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕೈಬರವಣಿಗೆಯನ್ನು ಪೊಲೀಸ್ ಠಾಣೆಯಲ್ಲಿ ತಯಾರು ಮಾಡಿತ್ತು ಎಂದರೆ ಸರಿಯಲ್ಲ. ದಿನಾಂಕ 01.03.2023 ರಂದು 1 ನೇ ಆರೋಪಿ ಕೃತ್ಯಕ್ಕೆ ಬಳಸಿದ್ದ ಮಚ್ಚನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಆದೀಶ್ ರವರ ಅಕ್ಕ ಯಾವುದೇ ಮೊಬೈಲ್ ಅನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಅದಕ್ಕೆ

ಸಂಬಂಧಪಟ್ಟಂತಹ ಪಂಚನಾಮೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಪಂಚನಾಮೆಗಳು ವಿವಿಧ ದಿನಾಂಕಗಳು ಮಾಡಿರುತ್ತವೆ ಎಂದು ಹೇಳಿದ್ದು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65–ಬಿ ಪ್ರಮಾಣ ಪತ್ರ ಒಂದನ್ನು ಮಾತ್ರ ಕೊಟ್ಟಿರುತ್ತೇನೆ ಎಂದರೆ ಸರಿ. ಸಂತೂ ಸ್ಟುಡಿಯೋ ದಲ್ಲಿ ನಾನು ಫೋಟೋಗಳನ್ನು ಪ್ರಿಂಟ್ ಹಾಕಿಸಿದ್ದೆ ಎನ್ನುವ ಬಗ್ಗೆ ಅವರ ಕಡೆಯಿಂದ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ನನಗೆ ವೈಯಕ್ತಿಕವಾಗಿ ಗಣಕಯಂತ್ರ ಕೊಟ್ಟಿರುವುದಿಲ್ಲ ಆದರೆ ಠಾಣೆಗೆ ಕೊಟ್ಟಿರುತ್ತಾರ ಆ ಗಣಕ ಯಂತ್ರವನ್ನು ಎಲ್ಲರೂ ಉಪಯೋಗಿಸುತ್ತೇವೆ ಎಂದರೆ ಸರಿ. ಗಣಕ ಯಂತ್ರದ ವಿವರಗಳನ್ನು ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ನಮ್ಮ ತನಿಖಾಧಿಕಾರಿಯವರ ನಿರ್ದೇಶನದ ಮೇರೆಗೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**